**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ.899/2022**

| | | |
|---|---|---|
| ಸಾಕ್ಷಿದಾರರ ಹೆಸರು | : ವಿ.ಎನ್. ಲತಾಮಣಿ | ಪ್ರಾಸಾ -1 |
| ಗಂಡನ ಹೆಸರು | : ಪುಟ್ಟಸ್ವಾಮೇಗೌಡ | ಚಾಸಾ-1 |
| ವಯಸ್ಸು | : 55 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವ್ಯವಸಾಯ | ದಿನಾಂಕಃ20.03.2025 |
| ವಾಸಸ್ಥಳ | : ಬಕ್ಕಿ | |

**ಪಾಟೀ ಸವಾಲು ಶ್ರೀ ಎಸ್.ಬಿ.ಎ ವಕೀಲರಿಂದಃ**

ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದ ಸ.ನಂ.40 ರಲ್ಲಿರುವ 6 ಎಕರೆ ಜಮೀನು ನನ್ನ ಗಂಡನ ಹೆಸರಿನಲ್ಲಿದ್ದು ಅವರಿಗೆ ಅವರ ತಂದೆಯಿಂದ ಕಡೆಯಿಂದ ಬಂದ ಜಮೀನಾಗಿರುತ್ತದೆ. ಸದರಿ ವಿಷಯಕ್ಕೆ ಸಂಬಂದಿಸಿದಂತೆ ದಾಖಲಾತಿಗಳನ್ನು ಪೋಲಿಸರಿಗೆ ನೀಡಿರುವ ಬಗ್ಗೆ ನನಗೆ ನೆನಪಿರುವುದಿಲ್ಲ. ಈ ಪ್ರಕರಣದಲ್ಲಿ ಸಲ್ಲಿಸಲಾಗಿರುವ ಕೆಲವು ದಾಖಲಾತಿಗಳ ಮಾಹಿತಿ ನನಗಿರುತ್ತದೆ. ಅದರಲ್ಲಿ ಸಿ.ಆರ್.ಸಿ, ಪಾಲುಪಟ್ಟಿ, ಪಹಣಿ ಮತ್ತು ಬ್ಯಾಂಕ್ ನಲ್ಲಿ ನಾವು ಸಾಲ ಪಡೆದಿರುವಾ ಬಾಬ್ತು ದಾಖಲಾತಿಗಳನ್ನು ನೀಡಿರುತ್ತೇನೆ. ಸದರಿ ದಾಖಲಾತಿಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲಾತಿಗಳು ನ್ಯಾಯಾಲಯದ ಕಡತದಲ್ಲಿ ಇಲ್ಲದಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ಪ್ರಕರಣ ನಡೆದ ದಿನ ನಾನೊಬ್ಬಳೆ ತೋಟದಲ್ಲಿ ಕಾಫೀ ಎರಕಲು ಮಾಡಲು ಹೋಗಿರುತ್ತೇನೆ. ನಾನು ತೋಟದಿಂದ ಮನೆಗೆ ಸುಮಾರು ಬೆ.9.15 ರ ಸಮಯಕ್ಕೆ ಹೊರಟಿರುತ್ತೇನೆ. ನಮ್ಮ ಮನೆಯಿಂದ ತೋಟಕ್ಕೆ 1 ಕೀ.ಮೀ ಅಂತರವಿರುತ್ತದ್ದು ನಮ್ಮ ಮನೆಗೆ ತೋಟದಿಂದ ಸುಮಾರು 15 ನಿಮಿಷಗಳ ಕಾಲ ಮನೆಗೆ ತಲುಪಲು ಬೇಕಾಗುತ್ತದೆ. ನಂತರ 9.20 ರ ಸಮಯಕ್ಕೆ ಚಾಸಾ-2 ರವರಿಗೆ ದೂರವಾಣಿ ಮುಖಾಂತರ ಪ್ರಕರಣದ ಬಗ್ಗೆ ಕರೆ ಮಾಡಿ ತಿಳಿಸಿರುತ್ತೇನೆ.

ಆ ದಿನ ಚಾಸಾ-2 ರವರ ಅವರ ಮನೆಯಲ್ಲಿಯೇ ಇರುತ್ತಾರೆ. ಚಾಸಾ-2 ರವರು ನಮ್ಮ ಮನೆಗೆ ಬಂದ ಕೂಡಲೇ 15 ನಿಮಿಷ ಬಿಟ್ಟು ಆಸ್ಪತ್ರೆಗೆ ಹೊರಟಿರುತ್ತೇವೆ. ಆಗ ಸಮಯ ಸುಮಾರು 10.00 ರಿಂದ 10.30 ರ ಸಮಯವಾಗಿರಬಹುದು. ಚಾಸಾ-2 ರವರು ನಮ್ಮ ಮನೆಗೆ ಬಂದ ಸಮಯವು ಈಗ ಖಚಿತವಾಗಿ ಹೇಳಲು ಸಾಧ್ಯವಾಗುತ್ತಿಲ್ಲ. ನಂತರ 12.00 ರಿಂದ 12.30 ರ ಸಮಯಕ್ಕೆ ನಾವು ಆಸ್ಪತ್ರೆಗೆ ತಲುಪಿರುತ್ತೇವೆ. ಆಸ್ಪತ್ರೆಯಲ್ಲಿ ನಾನೇ ಪ್ರಕರಣದ ಕುರಿತು ಹೇಳಿಕೆಯನ್ನು ನೀಡಿರುತ್ತೇನೆ. ಆಸ್ಪತ್ರೆಯಲ್ಲಿ ಪ್ರಕರಣದ ಕುರಿತು ನೀಡಿದ ಹೇಳಿಕೆಯ ಬಗ್ಗೆ ನೆನಪಿರುವುದಿಲ್ಲ. ಸಾಮಾನ್ಯವಾಗಿ ಕೂಲಿ ಕೆಲಸದವರು ಕೆಲಸಕ್ಕೆಂದು ನಮ್ಮ ತೋಟಕ್ಕೆ ಬರುತ್ತಾರೆ ಆದರೆ ಆ ದಿನ ನಾನು ಯಾರನ್ನು ಕರೆಯದ ಕಾರಣ ಯಾರು ಇರುವುದಿಲ್ಲ. ನಾನು ಆಸ್ಪತ್ರೆಯಲ್ಲಿ ನೀಡಿದ ಹೇಳಿಕೆಯನ್ನು ಓದಿ ನೋಡಿರುವ ಕುರಿತು ನೆನಪಾಗುತ್ತಿಲ್ಲ. ಆದ ಕಾರಣ ಸದರಿ ಹೇಳಿಕೆಯಲ್ಲಿ ಏನನ್ನು ಬರೆದಿರುತ್ತಾರೆ ಎಂಬುದು ತಿಳಿದಿರುವುದಿಲ್ಲ ಎಂದರೆ ನಾನು ಮಾಹಿತಿ

ನೀಡಿದ ಮೇರೆಗೆ ಹೇಳಿಕೆಯನ್ನು ಬರೆಯಲಾಗಿರುತ್ತದೆ ಎಂದು ನಂಬಿರುತ್ತೇನೆ ಎಂದು ನುಡಿಯುತ್ತಾರೆ. ನಾನು 7 ನೇ ತರಗತಿಯ ವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ಈ ಹಿಂದೆ 1 ನೇ ಆರೋಪಿಯ ವಿರುದ್ಧ ನೀಡಿದ ದೂರಿನಲ್ಲಿ ನಾನು ನೀಡಿರುವ ಸಾಕ್ಷಿಯ ಕುರಿತು ಈಗ ನೆನಪಾಗುತ್ತಿಲ್ಲ.

ಕೆಲವು ಬಾರಿ ನಾನು ದಾಖಲಾತಿಗಳನ್ನು ಓದದೆಯೂ ಸಹಿ ಹಾಕಿರುತ್ತೇನೆ. ನಾನು ಪ್ರಕರಣ ನೆಡದ ದಿನ ಧರಿಸಿದ ವಸ್ತ್ರದ ಬಗ್ಗೆ ಮಾಹಿತಿ ನೀಡಿರುತ್ತೇನೆ. ನಾನು ಧರಿಸಿದ ನೈಟಿ, ಶರ್ಟ್ ಮತ್ತು ತಲೆಬಟ್ಟೆಯ ಕುರಿತು ಪೋಲಿಸರಿಗೆ ಯಾವುದೇ ಮಾಹಿತಿ ನೀಡಿರುವುದಿಲ್ಲ. ನಾನು ಆ ದಿನ ನೈಟಿಯ ಮೇಲಿ ಒಂದು ಶರ್ಟ್ ನ್ನು ಧರಿಸಿರುತ್ತೇನೆ. ಸದರಿ ವಸ್ತ್ರವನ್ನು ಯಾವ ರೀತಿ ಧರಿಸಿರುತ್ತೇನೆ ಎಂಬುದರ ಬಗ್ಗೆ ನೆನಪಾಗುತ್ತಿಲ್ಲ. ಪ್ರಕರಣ ನಡೆದ ನಂತರ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಸಮಯದಲ್ಲಿ ಒಂದು ಫೋಟೋವನ್ನು ತೆಗೆಯಲಾಗಿರುತ್ತದೆ. ಇತರ ರೋಗಿಯಿಂದ ಒಂದು ಫೋಟೋವನ್ನು ತೆಗೆಸಿಕೊಂಡಿರುತ್ತೇನೆ. ಸದರಿ ಸಮಯದಲ್ಲಿ ತಲೆಬಟ್ಟೆಯನ್ನು ಹೊರತುಪಡಿಸಿ ನಾನು ಮೇಲೆ ಹೇಳಿದ ವಸ್ತ್ರಗಳನ್ನು ಧರಿಸಿರುತ್ತೇನೆ. ಕೃತ್ಯ ನಡೆದ ಸಮಯದಲ್ಲಿ ನಾನು ನಮ್ಮ ತೋಟದ ಒಳಗಿರುತ್ತೇನೆ. ಎಂ.ಒ.1 ಪ್ರಕರಣ ನಡೆದ ಸಮಯದಲ್ಲಿ ಸ್ಥಳದಲ್ಲಿಯೇ ಇತ್ತು. ಪ್ರಕರಣ ನಡೆದ ಸ್ಥಳದ ಚೆಕ್ಕುಬಂದಿಯು ಪೂರ್ವಕ್ಕೆ ಪುಟ್ಟಸ್ವಾಮಿಗೌಡ ರವರ ಜಮೀನು, ಪಶ್ಚಿಮಕ್ಕೆ ಪುಟ್ಟಸ್ವಾಮಿಗೌಡ ರವರ ಜಮೀನು, ಉತ್ತರಕ್ಕೆ ಪುಟ್ಟಸ್ವಾಮಿಗೌಡ ರವರ ಜಮೀನು, ದಕ್ಷಿಣಕ್ಕೆ 1 ನೇ ಆರೋಪಿಯಾದ ಇಂದ್ರೇಶ್ ರವರ ಜಮೀನು. ಸದರಿ ಚೆಕ್ಕುಬಂದಿಯನ್ನು ನಾನು ನೀಡಿದ ಮಾಹಿತಿಯ ಮೇರೆಗೆ ನಿಪಿ-2 ರಲ್ಲಿ ಬರೆಯಲಾಗಿರುತ್ತದೆ.

ದಕ್ಷಿಣಕ್ಕೆ 1 ನೇ ಆರೋಪಿಯಾದ ಇಂದ್ರೇಶ್ ರವರು ಜಮೀನು ಬರುತ್ತದೆ ಎಂದು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಕೃತ್ಯ ನಡೆದ ಸ್ಥಳದ ಆಜು ಬಾಜಿನಲ್ಲಿ ನನಗೆ ಮತ್ತು ಕೃಷ್ಣೇಗೌಡ ರವರಿಗೆ ಜಮೀನಿನ ಮಧ್ಯೆ ರಸ್ತೆ ಇರುತ್ತದೆ ಸಾಕ್ಷಿಯು ಮುಂದುವರೆದು ಇಂದ್ರೇಶ್ ರವರಿಗೆ ಸೇರಿದ ಜಮೀನಿನ ಬಳಿ ಕೃತ್ಯವು ನಡೆದಿರುತ್ತದೆ ಎಂದು ನುಡಿಯುತ್ತಾರೆ. ನಿಪಿ-2 ರ ಚೆಕ್ಕುಬಂದಿಯಲ್ಲಿ ಗುರುತಿಸಿರುವಂತೆ ಕೃಷ್ಣೇಗೌಡ ರವರ ಜಮೀನು, ಪುಟ್ಟಸ್ವಾಮಿ ಗೌಡ ರವರ ಜಮೀನಿನ ಮಧ್ಯದಲ್ಲಿ ಕೃತ್ಯವು ನಡೆದಿರುತ್ತದೆ. ಸದರಿ ವಿಷಯದ ಕುರಿತು ನಾನು ದೂರಿನಲ್ಲಿ ನಮೂದಿಸಿರು ಬಗ್ಗೆ ನೆನಪಾಗುತ್ತಿಲ್ಲ. ಘಟನಾ ಸ್ಥಳದ ಉತ್ತರಿ ದಿಕ್ಕಿಗೆ ರಸ್ತೆಯು ಇರುತ್ತದೆ. ಸದರಿ ವಿಷಯದ ಕುರಿತು ಚೆಕ್ಕುಬಂದಿ ಬರೆಯುವಾಗ ನಾನು ಪೋಲಿಸರಿಗೆ ನೀಡಿರುವ ಮಾಹಿತಿಯ ಬಗ್ಗೆ ನೆನಪಿರುವುದಿಲ್ಲ. ಈ ಹಿಂದೆಯೂ 1 ನೇ ಆರೋಪಿಯ ವಿರುದ್ಧ ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ಸದರಿ ಪ್ರಕರಣವೂ ಇದೇ ನ್ಯಾಯಾಲಯದ ಮುಂದೆ ಸಿಸಿ.896/2022 ರಡಿಯಲ್ಲಿ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ಸದರಿ ಪ್ರಕರಣದಲ್ಲೂ ಪ್ರಸ್ತುತ ಪ್ರಕರಣದಲ್ಲಿ ನೀಡಿರುವ ದೂರಿನ ಕುರಿತೆ ನಮೂದಿಸಲಾಗಿರುತ್ತದೆ ಎಂದರೆ ಸರಿ. ಬಕ್ಕಿ ಗ್ರಾಮಕ್ಕೆ ಸಮೀಪವಾಗಿ ಬಣಕಲ್ ಮತ್ತು ಮೂಡಿಗೆರೆ ಸರ್ಕಾರಿ ಆಸ್ಪತ್ರೆ ಇರುತ್ತದೆ ಎಂದರೆ ಸರಿ.

ಚಿಕಿತ್ಸೆಗೆ ಬಂದ ಸಮಯದಲ್ಲಿ ವೈದ್ಯರು ಇಲ್ಲದ ಕಾರಣ ಚಿಕ್ಕಮಗಳೂರಿನ ಸರ್ಕಾರಿ

ಆಸ್ಪತ್ರೆಗೆ ಹೋಗಿರುತ್ತೇನೆ. ಈ ಹಿಂದೆ 1 ನೇ ಆರೋಪಿಯ ವಿರುದ್ಧ ನೀಡಿದ ದೂರಿನ ಬಾಬ್ತು ಮೂಡಿಗೆರೆ ಆಸ್ಪತ್ರೆಯಲ್ಲಿ ನನಗೆ ಯಾವುದೇ ತೊಂದರೆ ಇರದ ಕಾರಣ ಇಲ್ಲಿ ದಾಖಲು ಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಈ ಹಿಂದಿನ ಪ್ರಕರಣದ ಕುರಿತು ನಾನು ಚಿಕ್ಕಮಗಳೂರಿನ ಆಸ್ಪತ್ರೆಯಲ್ಲಿ ದಾಖಲಾಗಿರುತ್ತೇನೆ ಎಂದರೆ ಸರಿ. ಇದೇ ರೀತಿ ದೂರು ಕೊಡುವ ಹವ್ಯಾಸ ನನ್ನದಾಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಜಮೀನಿನ ದಕ್ಷಿಣ ದಿಕ್ಕಿಗೆ ಬೇಲಿ ಇರುತ್ತದೆ. ನೀಲಿ ಬಣ್ಣದ ನೈಟಿಯನ್ನು ಪೋಲಿಸರು ಸ್ಥಳ ಮಹಜರ್ ಗೆ ಬಂದ ಕಾಲದಲ್ಲಿ ನಾನೇ ನೀಡಿರುತ್ತೇನೆ. ಎಂ.ಒ.2 ರಿಂದ 4 ನ್ನು ಪೋಲಿಸರು ಸ್ಥಳ ಮಹಜರ್ ಗೆ ಬಂದ ಕಾಲದಲ್ಲಿ ನಾನು ತೋರಿಸಿರುತ್ತೇನೆ. ದಿ.13.01.2022 ರಂದು ನನ್ನ ಗಂಡ ಮತ್ತು ಇತರರ ವಿರುದ್ಧ 1 ನೇ ಆರೋಪಿಯು ಒಂದು ದೂರನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ದೂರು ಸುಳ್ಳಾಗಿರಬಹುದು ಎಂದು ನುಡಿಯುತ್ತಾರೆ. ಸದರಿ ದೂರಿನಲ್ಲಿ ಯಾವ ಅಂಶಗಳನ್ನು ನಮೂದಿಸಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. ನನ್ನ ಗಂಡ 1 ನೇ ಆರೋಪಿಯವರ ತೋಟದಲ್ಲಿ ಕಾಫೀ ಕಳ್ಳತನದ ಕುರಿತು ಒಂದು ಪ್ರಕರಣವು ಕ್ರೈ.ನಂ.1/2022 ರ ಅಡಿಯಲ್ಲಿ ಪ್ರಕರಣ ದಾಖಲಾಗಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

ಸದರಿ ಪ್ರಕರಣದಲ್ಲಿ ನನ್ನ ಗಂಡ ರವರು ನಿರೀಕ್ಷಣಾ ಜಾಮೀನು ಪಡೆದಿರುವ ಕುರಿತು ನನಗೆ ನೆನಪಿರುವುದಿಲ್ಲ. ಅದೇ ರೀತಿ 2 ನೇ ಆರೋಪಿಯು ನನ್ನ ಗಂಡನ ವಿರುದ್ಧ ನೀಡಿರುವ ದೂರಿನ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ಪ್ರಕರಣಗಳ ಪ್ರತಿಯಾಗಿ ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದಲ್ಲಿ ತಿಳಿಸಿರುವ ಜಮೀನಿಗೆ ಸಂಬಂಧಿಸಿದಂತೆ ಅಸಲು ದಾವಾ 47/2021 ರಡಿಯಲ್ಲಿ ಒಂದು ಸಿವಿಲ್ ವ್ಯಾಜ್ಯ ಚಾಲ್ತಿಯಲ್ಲಿರುವ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸದರಿ ಪ್ರಕರಣದಲ್ಲಿ ನಾವು ಸಲ್ಲಿಸಿದ ಮಧ್ಯಂತರ ಅರ್ಜಿ ದಿ.23.11.2021 ರಂದು ವಜಾ ಆಗಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಅದನ್ನು ಪ್ರಶ್ನಿಸಿ ಸಲ್ಲಿಸಿದ ಅರ್ಜಿಯು ವಜಾಗೊಂಡಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ಆದ ಕಾರಣ ನಾನು ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರಕರಣ ನಡೆದ ದಿನ ಸ್ಥಳದಲ್ಲಿಯೇ ಇರಲಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿಯು ನನ್ನ ಗಂಡನ ತಮ್ಮನಾಗಿರುತ್ತಾರೆ. 1 ನೇ ಆರೋಪಿಯು ನನ್ನ ಗಂಡನ ಅಣ್ಣನ ಮಗ. 3 ಮತ್ತು 4 ನೇ ಆರೋಪಿಗಳು ಸಂಬಂಧದಲ್ಲಿ ಮೊಮ್ಮಕ್ಕಳಾಗಿರುತ್ತಾರೆ. ನಾವು ಹೇಳಿದಂತೆ ಸ.ನಂ.40 ರಲ್ಲಿ ಜಮೀನು ಇರದ ಕಾರಣ ಆರೋಪಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.